

ಕಳೆದ ವಾರದ 'ಚೆನ್ನುಡಿ'
'ಡೆನ್ನ ಡೆನ್ನ ಡೆನ್ನಾನ' ಕೇಳಿ...
ಉಮಾ ಅನಂತ್ ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್ ಕೇಳಲು
ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.



ಹೆಬ್ಬೆ ಕ್ಷೇತ್ರ

ಮಣ್ಣಿನ ಬಸವಗಳನ್ನು ಕೂರಿಸಿ, ತೇರೆಳೆಯುತ್ತಾ ಮನೆಮನೆಗೆ ಹೋಗಿ, 'ಬಸವಣ್ಣ ಬಂದಿದಾನೆ. ಅವನಿಗೆ ತಿಂಡಿದಕ್ಷಿಣೆ ಕೊಡಿ...' ಎಂದಾಗ, ಹಿರೀರು ಕೊಡೋ ಚೂರು ಕಾಸು, ಚಕ್ಕುಲಿ ಎಲ್ಲಾನೂ ಹಂಚ್ಕಳದು, ಆಹಾ, ಎಂಥಾ ಮುದ ಅಂತೀರಿ ಕಾರ್ತಿಕ್ ಮಾಸದ ದೀಪಾರಾಧ್ನೆ, ಸುಬ್ರಹ್ಮಣ್ಯನ ರಥೋತ್ಸವ, ಮನೆಮನೆಗೆ ಎಳ್ಳು ಬೀರೋ ಶಂಕ್ರಾಂತಿ, ದೀಪಾವಳಿ ಅಬ್ಬಬ್ಬಾ, ಒಂದೊಂದ್ರಲ್ಲೂ ಬಣ್ಣ ತುಂಬಿತುಳುಕುತ್ತೆ

ಹಿಂದೆ ನನ್ನಜ್ಜಿ ಛೋಟು ಅನ್ನೋ ಅನಾಥ ಮುಸಲ್ಮಾನ ಹುಡುಗನ್ನ ಭಾಳ ವರ್ಷ ಮನೇಲಿಟ್ಕಂಡು ಸಾಕಿದ್ಲು. ಅವ್ನೂ ನಮ್ಜೊತೆ ಒಬ್ಬನಾಗಿದ್ದ. ಗಣಪತಿ ಮಂಟಪ ಕಟ್ಟೋವಾಗ ಇವ್ನ ಹುರುಪೇ ಜಾಸ್ತಿ. ಅಜ್ಜಿ ಮಾಡೋ ಒಬ್ಬಟ್ಟು, ಮಜ್ಜಿಗೆ ಹುಳಿ, ಗೊಜ್ಜು ಎಂದರೆ ಇವ್ನಿಗೆ ಪ್ರಾಣ. 'ಅಜ್ಜಿ ಒಬ್ಬಿಟ್ಟು ಇನ್ನೂ ಎರ್ಡು ಕೊಡ್ದಿದ್ರೆ, ನಮ್ದೂಕೆ ನಿಮ್ ಮಡಿ ಕೆಡಿಸ್ತಾವ್...', 'ಅಜ್ಜಿ, ಈವತ್ತು ಕುಂಬಳ್‌ಕಾಯ್ ಇಳಸ್ತೀನಿ, ಮಜ್ಗೆಹುಳಿದು ಮಾಡು...' ಹೀಗೆಲ್ಲ ಸತಾಯಿಸ್ತಿದ್ದೋನಿಗೆ ಸಿಕ್ಕ ಪ್ರೀತಿ, ಅವ್ನೂ ಕೊಟ್ಟ ವಿಶ್ವಾಸ ಚೋದ್ಯವೇ ಅಲ್ವೇನ್ರೀ? ಹೀಗೇ ಇಲ್ಲಿನ ಮೊಹರಂ ಹಬ್ಬದಲ್ಲಿ ನನ್ನಣ್ಣ ಹುಲಿವೇಷ ಹಾಕಿ ಕುಣಿತಿದ್ದ, ರಾತ್ರಿಯ ಉರುಸ್‌ನಲ್ಲಿ ನಮ್ಮೂರಿನ್ ಬ್ರಾಹ್ಮಣ ಯುವಕ್ರು ಭಾಗವಹಿಸ್ತಿದ್ರು, 'ಅಲ್ಲಾಬಿ' ದೇವರ ಉತ್ಸವ ನಮ್ಮೂರ ಬೀದಿಗಳಿಗೆ ಬರ್ತಿದ್ರು, ನಮ್ಮೋರು ದೇವ್ರನ್ನು ಒಳಗೆ ಕರ್ಕೊಂಡು, ಹರಕೆ ಹೇಳಿ ಕಾಣಿಕೆ ಕಟ್ತಿದ್ರು, ಅವ್ರಿಂದ ಮಂತ್ರಿಸಿದ ಭಸ್ಮ, ಸಕ್ಕರೆಯ ಆಶೀರ್ವಾದ ಪಡೀತಿದ್ವಿ. ಎಂಥಾ ಸಾಮರಸ್ಯದ ಬದುಕು ನಮ್ಮಲ್ಲಿದೆ ಅನ್ನೋದೇ ಸಂಭ್ರಮ ಅಲ್ವೇನ್ರೀ?



ಗಣೇಶ ಸುಬ್ರಹ್ಮಣ್ಯ ಈಶ್ವರ ದೇವಸ್ಥಾನಗಳು, 800 ವರ್ಷಗಳ ಜೈನ ಬಸದಿ ಮಠ, ಮೌಲ್ಯಯುತ ಶಿಕ್ಷಣ ಕೊಡುವ ಶಾಲೆ, ಒಂದು ಚರ್ಚ್, ಒಂದು ಮಸೀದಿ, ಚರಿತ್ರೆಯ ಈರಮ್ಮಾಜಿಯವರು ಕಟ್ಟಿಸಿದ ಕೆರೆ, ರೈಲುಹಳಿ, ಊರಿಗಿದ್ದ ಒಂದೇ ಸಿನಿಮಾ ಟೆಂಟು, ಒಣಗಿದ್ರೂ ಘಮಘಮಾ ಅನ್ನೋ ಸುರಗಿ, ಆಹಾ ರುಚಿಯ ಬೆಮ್ಮಾರ್ಲೇ, ಕಲ್‌ಸಂಪ್ಗೆ ಹಣ್ಣು, ನನ್ನೂರು ಸ್ವರ್ಗವೇ ಹೌದ್ರೀ...

ಅರೆರೇ, ನನ್ ಕಾಲದ್ ಟೂರಿಂಗ್ ಟಾಕೀಸ್ ಕಥೆ ಹೇಳ್ಬಿಡ್ತೀನಿ, ಈಗ ಸರ್ಯಾದ ಸಿನಿಮಾ ಟಾಕೀಸ್ ಆಗಿದೆಯಾದ್ರೂ ಹಿಂದೆ ತಡಿಕೆ ಗುಡಿಸಿಲಿನಂತಿದ್ದ ಇದ್ರೊಳ್ಗೆ, ಹಿಂದೆ ನಾಲ್ಕು ಬಣ್ಣವಿರದ ಮರದ್ ಕುರ್ಚಿ ಸೀಟು, ಇದೇ ಹೈಕ್ಲಾಸು, ಒಂದು ರೂಪಾಯಿ ದರ; ಮುಂದೆ ಆರೇಳು ಲಡಲಡಾ ಅನ್ನೋ ಬೆಂಚು, ಐವತ್ತು ಪೈಸೆ ಸೀಟು, ಮುಂದಿನದು ಅಪ್ಪಟ ಭೂಮ್‌ತಾಯ ಒರಟೊರಟು ನೆಲ, ನಾಕಾಣೆ ಸೀಟು. ಮೊದ್ಲಿಗೇ ಟಾಕೀಸಲ್ಲಿ ಶುರುಮಾಡುವ, ನಮೋ ವೆಂಕಟೇಶ, ನಮೋ ತಿರುಮಲೇಶ...' ಹಾಡಿನ ದನಿ ಕೇಳ್ತಿದ್ ಹಾಗೇ, 'ನಡ್ಯೇ ಹೊರ್ಡಣ...' ಅಂತ ಸಿನಿಮಾ ಹುಚ್ಚಿನ ಅಜ್ಜಿ ಕಂಕ್ಳಲ್ಲಿ ಹಳೇ ಬೆಡ್ಶೀಟು ಹಿಡ್ದು, ನನ್ನ ಎಳ್ಕಂಡು ಹೊರಟೇಬಿಡ್ತಿದ್ಲು. ಟಾಕೀಸು ಹತ್ರ ಬಂದಂತೆ ನನ್ನ 'ಟಕ್ಕಂತ' ಸೊಂಟಕ್ಕೇರಿಸಿಕೊಂಡಾಗ, 'ಏ ಥೂ ಬಿಡೇ...' ಅಂತ ನನ್ನ ಕೊಸರಾಟ. 'ಅಯ್ಯಾ, ಸುಮ್ನಗ್ ಕೂತ್ಗ, ಎಂಟಕ್ಕೇ ಈ ಪಾಟಿ ಉದ್ದಕ್ ಬೆಳ್ದ್ ಕೂತಿದೀ, ಅವ್ನಲ್ಲಿ ಅಜ್ಜೀ, ಇಷ್ಟ್ ದೊಡ್ ಹುಡ್ಗಿಗೆ ತಿಕೀಟು ತಗಾ' ಅಂತ ಗಲಾಟೆ ಮಾಡಿದ್ರೆ, ಇರುದೇ ಇನ್ನೆರಡಾಣೆ. ನಿಂಗಲ್ಲಿ ಕಡ್ಲೇಕಾಯಿ ಕೊಡುಸ್ಬೇಕೋ ಬ್ಯಾಡ್ವೋ...' ಸಿನಿಮಾ, ಕಡ್ಲೇಕಾಯಿ ಆಸೆಗೆ ನಾನೂ ತೆಪ್ಪಗಾಗ್ತಿದ್ದೆ. ಕಂಕ್ಳಲ್ಲಿದ್ದ ಬೆಡ್ಶೀಟು ತಗ್ದುದಿಣ್ಣೆಯ ನೆಲದ್ ಮೇಲೆ ಹಾಸಿ ಕೂತ್ರೆ ಅದು ಶರಮಂಚದ್ ಥರ, ಈಗ ನೆನಸ್ಕೊಂಡ್ರೆ ನಗು ಬರುತ್ತೆ.

ಅಗ್ರಹಾರ, ಪೇಟೆ, ಬಸದಿಮಠ ಅಂತ ಮುಖ್ಯ ಮೂರು ಭಾಗವಾಗಿರೋ ನನ್ನೂರ ಮಾರಮ್ಮ, ಸುಬ್ರಹ್ಮಣ್ಯ, ರಾಮೋತ್ಸವ ಜಾತ್ರೆ, ಕಾರ್ತೀಕದ ಲಕ್ಷದೀಪ, ಗೌರಿಗಣೇಶ ಹಬ್ಬದ ಶಾಸ್ತ್ರ ಸಂಪ್ರದಾಯ, ಶಾಲಾ ಚಟುವಟಿಕೆಗಳು ಎಲ್ಲ ನೋಡೋದೇ ಒಂದು ಸಡಗರ ಕಣ್ರೀ. ಬದ್ಲಾವಣೆ ಗಾಳಿ ಬೀಸ್ದಾಗ ಯಾವ ನೆಲವೂ ಬದ್ಲಾಗಲೇಬೇಕಲ್ವೇ? ಹಂಗೇ ನನ್ನೂರೂ ಹಿಂದಿದ್ದಂತೆ ಇಲ್ಲಾ ಅನ್ನದು ನಿಜವಾದ್ರೂ, ಎಷ್ಟೋ ಬುನಾದಿ ಸಂಪ್ರದಾಯ, ಬದ್ಕಿನ್ ರೀತಿ, ಆಚಾರ ವಿಚಾರ ಇನ್ನೂ ಇದೇರೀ. ನೆಲ ತುಳಿದ್ರೆ ಸಾಕು ಸುಂಯ್ ಅಂತ ಬೀಸೋ ಗಾಳಿ ಹುಟ್ಟೂರ ಗಂಧ ಚೆನ್ನುಡಿಗಳ ದಂಡೇ ಹೊತ್ತು, ಆ ತನಿಬನಿ ನಮ್ಮನ್ನು ಬೆಸ್ದಿದ್ದು ನೆನಪಾಗತ್ರೀ, ಮತ್ತೆ, 'ನಮ್ಮೂರೇ ಚಂದ' ಅಂತ ಹೇಳ್ದಿರಕ್ಕಾಗುತ್ತಾ?

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು.
ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– editorsu@sudha.co.in